ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಕೊಪ್ಪಳ ನಗರದಲ್ಲಿ ಒಂದು ಬೈಪಾಸ್ ರಸ್ತೆ ಮಾಡುವ ಯೋಚನೆ ಸರ್ಕಾರದ ಹಂತದಲ್ಲಿ ಇದೆಯೇ ಎಂದು ಕೇಳಿದ್ದಾರೆ. ಸರ್ಕಾರದ ಗಮನದಲ್ಲಿ ಅಮ ಯಾವುದು ಇಲ್ಲ. ಅತಿ ಅವಶ್ಯ ಇದ್ದರೆ ಅದರ ಬಗ್ಗೆ ನಾನು ಸರ್ವೇ ಮಾಡಿಸುತ್ತೇನೆ, ಸರ್ವೇ ರಿಪೋರ್ಟ್ ಬಂದ ನಂತರ ಅದು ಅವಶ್ಯ ಕಂಡುಬಂದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು. ಎರಡನೆಯದಾಗಿ ಕಟ್ಟಡ ಕೆಡವುದಕ್ಕೆ ಹತ್ತಿದ್ದಾರೆ ಎನ್ನುತ್ತಾರೆ. ನಾವು ಯಾವುದೇ ಕಟ್ಟಡ ಕೆಡವುದಿಲ್ಲ. ಆದರೆ ಇವತ್ತು ಎಲ್ಲಾದರೂ ಎನ್ ಕ್ರೋಚಮೆಂಟ್ ರಸ್ತೆ ಆಗುತ್ತಿದ್ದರೆ, ಕೆಲವು ಅನಿವಾರ್ಯವಾಗಿ ತೆಗೆಸಲೇಬೇಕಾಗುತ್ತದೆ. ಒಂದು ಮಾತು ನಾನು ಈ ಸಭೆಗೆ ಹೇಳುತ್ತಿದ್ದೇನೆ, ಲೋಕೋಪಯೋಗಿ ಇಲಾಖೆಯ ರಸ್ತೆ ಮೇಲೆ ಯಾರಾದರೂ ಎನ್ ಕ್ರೋಚ್ ಮೆಂಟ ಮಾಡುತ್ತಿದ್ದರೆ ನಾವು ಎನ್ ಕ್ರೋಚ್‌ಮೆಂಟ್ ಸಹಿಸುವುದಿಲ್ಲ. ಏಕೆಂದರೆ ಅಪಘಾತವಾಗುತ್ತದೆ. ಅದರ ಸಲುವಾಗಿ ಅತಂಹ ಪ್ರಸಂಗದಲ್ಲಿ ನಾವು ಕಟ್ಟುನಿಟ್ಟಾಗಿ ತೆಗೆಸುತ್ತೇವೆ.

ಶ್ರೀ ಅಮರಪ್ಪಕರಡಿ : ಸನ್ಮಾನ್ಯ ಅಧ್ಯಕ್ಷರೆ, ಎನ್ ಕ್ರೋಚ್ ಮೆಂಟ ಮಾಡಿದಾಗ ಅದನ್ನು ತೆಗೆಸತಕ್ಕಂಥದ್ದು ಸ್ವಾಭಾವಿಕ. ಆದರೆ ಯಾವುದೇ ಪೂರ್ವಾಲೋಚನೆಯಿಂದ ಅವರಿಗೆ ನೋಟಿಸ್ ಜಾರಿ ಮಾಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಜಾರಿ ಮಾಡಿ ಅಥವಾ ಅವರಿಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿದರೆ ಸರಿ ಎಂದು ನನ್ನ ಭಾವನೆ. ಆ ದಿಸೆಯಲ್ಲಿ ಸಭಾಧ್ಯಕ್ಷರಲ್ಲಿ, ಸನ್ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುತ್ತೇನೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ಅಲ್ಲಿ ನೂರಾರು ಹಬ್ಬದ ಅಂಗಡಿಗಳು ಮತ್ತು ಸಣ್ಣ ಪುಟ್ಟ ವ್ಯಾಪಾರಿ ಮಳಿಗೆಗಳು ಇವತ್ತು ಕಿತ್ತು ಹಾಕಿದ್ದಾರೆ. ಅದಕ್ಕೆ ಅವರಿಗೆ ಏನಾದರೂ ಒಂದು ಕಾಂಪೆನ್ ಸೇಷನ್ ಅಥವಾ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಒದಗಿಸಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಮ್ಮ ಮುಖ್ಯ ಮಂತ್ರಿಗಳು ಸವಿಸ್ತಾರವಾಗಿ ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ ಅದೇ ಉತ್ತರ ಇವತ್ತಿನ ದಿವಸ ನನ್ನ ಮೇಲೆ ಬಂಧನಕಾರಿಯಾಗಿದೆ. ಎರಡನೆಯದಾಗಿ ಅವರ ಜಾಗವನ್ನು ನಾವು ಅತಿಕ್ರಮಣ ಮಾಡಿದರೆ ಅಥವಾ ಎನ್ ಕ್ರೋಚ್‌ಮೆಂಟ್ ಮಾಡಿದರೆ, ಸರ್ಕಾರ ತೆಗೆದುಕೊಂಡರೆ ಮಾತ್ರ ನಾವು ಕಾಂಪನಸೇಷನ್ ಕೊಡಬೇಕಾಗುತ್ತದೆ. ನಮ್ಮ ಜಾಗವನ್ನು ಅವರು ಎನ್ ಕ್ರೋಚ್ಮೆಂಟ್ ಮಾಡಿದರೆ ನಾವು ಕಾಂಪೆನ್ಸೇಷನ್ ಕೊಡುವಂತಹ ಪ್ರಸಂಗ ಬರುವುದಿಲ್ಲ. ಆದ ಕಾರಣ ಏನಾದರೂ ಜಾಗ ನಾವು ತೆಗೆದುಕೊಂಡಲ್ಲಿ ನಾವು ಸರ್ಕಾರದ ನಿಯಮಗಳ ಪ್ರಕಾರ ಕಾಂಪೆನ್ ಸೇಷನ್ ಕೊಡುತ್ತೇವೆ. ಆದರೆ ನಮ್ಮ ಸರ್ಕಾರದ ಜಾಗ ಇದ್ದರೆ ಕಾಂಪೆನ್ ಸೇಷನ್ ಕೊಡುವುದಕ್ಕೆ ಬರುವುದಿಲ್ಲ.

ಚಿತ್ರದುರ್ಗ ಜೋಗಮಟ್ಟಿಯಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆ.

123 - ಶ್ರೀ ಎಮ್. ಚಂದ್ರಪ್ಪ (ಭರಮಸಾಗರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗದ ಜೋಗಿಮಟ್ಟಿಯಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಬಹಳ ಯೋಗ್ಯವಾದ ಪ್ರದೇಶವೆಂದು ಸರ್ವೇ ಮಾಡುರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸ್ಥಳದಲ್ಲಿ ಯಾವಾಗಿನಿಂದ ವಿದ್ಯುತ್ ಉತ್ಪಾದನೆ ಮಾಡಲಾಗುವುದು, ಎಷ್ಟು ಮೆಗಾವ್ಯಾಟ್ ವಿದ್ಯುತ್ ದೊರೆಯುವುದು? ಒಂದು ಮೆಗಾವ್ಯಾಟ್ ವಿದ್ಯುತ್ ಎಷ್ಟು ಹಣ ಖರ್ಚಾಗುತ್ತದೆ.

ಇ) 1996-97ನೇ ಸಾಲಿನಿಂದ ಪ್ರಾರಂಭವಾಗುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) 1996-97ನೇ ಸಾಲಿನಲ್ಲಿ ಉತ್ಪಾದನೆ ಪ್ರಾರಂಭವಾಗುವ ನಿರೀಕ್ಷೆ ಇದೆ. ಈ ಪ್ರದೇಶದಲ್ಲಿ ಸುಮಾರು 50.00 ಮೆ.ವ್ಯಾ. ಸಾಮರ್ಥ್ಯದ ಗಾಳಿ ವಿದ್ಯುತ್‌ನ್ನು ಉತ್ಪಾದನೆ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಒಂದು ಮೆಗಾವಾಟ್ ಗಾಳಿ ವಿದ್ಯುತ್ ಉತ್ಪಾದನೆಗೆ ಒಟ್ಟು ಅಂದಾಜು 5 ಕೋಟಿ ರೂ.ಗಳು ಖರ್ಚಾಗುತ್ತದೆ.

ಇ) 1996-97ನೇ ಸಾಲಿನಲ್ಲಿ ಉತ್ಪಾದನೆ ಪ್ರಾರಂಭವಾಗುವ ನಿರೀಕ್ಷೆ ಇದೆ.

ಶ್ರೀ ಎಂ. ಚಂದ್ರಪ್ಪ : ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗದಲ್ಲಿ ಗಾಳಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಯೋಗ್ಯವಾದ ಪ್ರದೇಶವೆಂದು ಈಗಾಗಲೇ ಸರ್ಕಾರ ಗುರ್ತಿಸಿದೆ. ಇಲ್ಲಿ 1996-97ನೇ ಸಾಲಿನಲ್ಲಿ ಉತ್ಪಾದನೆ ಪ್ರಾರಂಭವಾಗುವ ನಿರೀಕ್ಷೆ ಇದೆ ಎನ್ನತಕ್ಕಂಥ ಮಾತನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿರುತ್ತಾರೆ. ಆದರೆ ಇಲ್ಲಿ ಕುಡಿಯುವ ನೀರಿಗೆ 400-500 ಅಡಿ ಬೋರ್ವೆಲ್ ಮಾತ್ರ ಸಾಧ್ಯ. ಇಲ್ಲಿ ಹ್ಯಾಂಡ್ ಪಂಪ್ಗಳನ್ನು ಅಳವಡಿಸಿದರೆ ಕುಡಿಯುವ ನೀರಿಗೆ ಬಹಳ ಕಷ್ಟವಾಗುತ್ತದೆ. ಇದೊಂದು ಬರಗಾಲದ ಪ್ರದೇಶ. ಆದಕಾರಣ ಸರ್ಕಾರ 1996-97 ನೇ ಸಾಲಿನಿಂದಲೇ ಪ್ರಾರಂಭಿಸುತ್ತದೆಯೇ ಎನ್ನುವಂಥ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್: ಸನ್ಮಾನ್ಯ ಅಧ್ಯಕ್ಷರೇ, ನಮ್ಮರಾಜ್ಯದಲ್ಲಿ ಗಾಳಿಯಿಂದ ವಿದ್ಯುತಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥ ಕೇಂದ್ರಗಳ ಪೈಕಿ ಚಿತ್ರದುರ್ಗದ ಜೋಗಿಮಟ್ಟಿಯು ಕೂಡ ಒಂದು. ಈಗಾಗಲೇ ನಾವು ಅಲ್ಲಿ ಒಂದು ಕಂಪನಿಗೆ ಪರ್ಮಿಶನ್ ಕೊಟ್ಟಿದ್ದೇವೆ. ಅಲ್ಲಿ ಲ್ಯಾಂಡ್ ಅಕ್ವಿಜಿಶನ್ ಪ್ರಾಬ್ಲಮ್ ಇದೆ. ಅದು ಫಾರಸ್ಟ ಡಿಪಾರ್ಟಮೆಂಟಗೆ ಸೇರಿದೆ. ಜೋಗಿಮಟ್ಟಿಯಲ್ಲಿ 50 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುವ ಶಕ್ತಿ ಇದೆ. ಈಗ ಮಾನ್ಯ ಸದಸ್ಯರು ಕುಡಿಯುವ ನೀರಿಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ಅನುಕೂಲವಾಗಲಿ ಅಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಈಗಾಗಲೇ ನಾವು ಒಂದು ಕಂಪನಿಯವರಿಗೆ ಕೊಟ್ಟಿದ್ದೇವೆ ಮತ್ತು ಕರ್ನಾಟಕ ಪವರ್ ಕಾರ್ಪೋರೇಶನ್ನಿಂದ ಕೂಡ ಮಾಡುವ ಇಚ್ಛೆ ಇದೆ.